[ **Govt. of Karnataka** **C.R.P. 67]**

| Deposition Sheets (RP.No.57) Form No.4 |
|---|

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 2118/2023**

ಪಿ.ಡಬ್ಲ್ಯು : 1 ಸಿ.ಡಬ್ಲ್ಯು : 1

ಸಾಕ್ಷಿದಾರನ ಹೆಸರು : ಸಂಜಯ್ ಶೆಟ್ಟಿ
ತಂದೆಯ ಹೆಸರು : ಜಗನ್ನಾಥ್ ಶೆಟ್ಟಿ
ಪ್ರಾಯ : 46 ವರ್ಷ
ಉದ್ಯೋಗ : ಖಾಸಗಿ
ವಾಸ : ನಿಟ್ಟೆ

ದಿನಾಂಕ 28.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಅರೋಪಿತರ ಪರಿಚಯ ಇದೆ. ಚಾಸಾ-2 ಮತ್ತು 3 ರವರ ಪರಿಚಯ ಇರುವುದಿಲ್ಲ.

ದಿಃ07.08.2023 ರಂದು ನಾನು ನನ್ನ ಮನೆ ನಿಟ್ಟೆಯಿಂದ ಕಾರ್ಕಳ ಕಡೆಗೆ ಸ್ಕೂಟಿಯಲ್ಲಿ ಬರುತ್ತಿರುವಾಗ ಸಂಜೆ 4.00 ಗಂಟೆಗೆ ನಿಟ್ಟೆಯ ಬೆಮ್ಮರ್ ಅಡ್ಯಾಂತಾಯ ಕ್ರಾಸ್ ಬಳಿ ಮೃತ ಮಂಜುನಾಥ ಶೆಟ್ಟಿಯವರು ಮೆಸ್ಕಾಂ ಕಚೇರಿಗೆ ಹೋಗಲು ಬಲ ಬದಿಯ ಸೂಚನೆ ನೀಡಿ ತಿರುಗಿಸುತ್ತಿರುವಾಗ ಅದೇ ಕಡೆಯಿಂದ ಬರುತ್ತಿದ್ದ 1 ನೇ ಆರೋಪಿಯು ಚಲಾಯಿಸುತ್ತಿದ್ದ ವಾಹನವು ಅತೀವೇಗ ಹಾಗೂ ಅಜಾಗರೂಕತೆಯಿಂದ ಬಂದು ಸ್ಕೂಟಿಯ ಬಲ ಬದಿಗೆ ಬಂದು ಢಿಕ್ಕಿಪಡಿಸಿರುತ್ತಾರೆ. ಢಿಕ್ಕಿಪಡಿಸಿದ ಪರಿಣಾಮ ಮಂಜುನಾಥ ರವರ ಸ್ಕೂಟಿಯನ್ನು 15 ಮೀಟರ್ ಎಳೆದುಕೊಂಡು ಹೋಗಿ ಬಿದ್ದರು. ತಕ್ಷಣ ನಾನು ನನ್ನ ವಾಹನವನ್ನು ನಿಲ್ಲಿಸಿ ಹೋಗಿ ನೋಡಲಾಗಿ ಮಂಜುನಾಥರವರ ತಲೆ, ಮೂಗು ಕಾಲುಗಳಿಗೆ ಗಾಯವಾಗಿತ್ತು. ನಾನು ತಕ್ಷಣ ಒಂದು ಆಟೋದಲ್ಲಿ ಮಂಜುನಾಥರವರನ್ನು ನಿಟ್ಟೆ ಗಾಜ್ರೆಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿ ಪ್ರಥಮ ಚಿಕಿತ್ಸೆಯನ್ನು ಕೊಡಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ ಆಸ್ಪತ್ರೆಗೆ ಅಂಬ್ಯುಲೆನ್ಸ್‌ನಲ್ಲಿ ಕರೆದುಕೊಂಡು ಹೋಗಿರುತ್ತೇವೆ.

ಅಲ್ಲಿನ ವೈದ್ಯರು ಪರೀಕ್ಷಿಸಿ ಮಂಜುನಾಥ ಶೆಟ್ಟಿಯವರು ಮೃಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ನಾನು ಪೊಲೀಸ್ ಠಾಣೆಗೆ ರಾತ್ರಿ 1.30 ಗಂಟೆಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಶವ ತನಿಖಾ ವರದಿಗೆ ಸಹಿಯನ್ನು ಮಾಡಿ ಶವ ತನಿಖಾ ವರದಿಯ ಕಲಂ 9 ರಂತೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಸದ್ರಿ ಶವ ತನಿಖಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ಶವ ತನಿಖಾ ವರದಿ ಸಮಯದಲ್ಲಿ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಯು ಅಪಘಾತಕ್ಕೊಳಪಟ್ಟ ವಾಹನಗಳ ಮತ್ತು ಹೆಲ್ಮೆಟ್ ನ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-4 ರಿಂದ 7 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಎಸ್ ಕೆ ಎಸ್ ವಕೀಲರಿಂದ ಃ

ನಿಪಿ-1 ನ್ನು ಪೊಲೀಸ್ ಪೇದೆಯು ಠಾಣೆಯಲ್ಲಿ ರಾತ್ರಿ 1.30 ಗಂಟೆಗೆ ಬರೆದಿರುತ್ತಾರೆ. ಪಿರ್ಯಾದಿನಲ್ಲಿ ನಾನು ಆರೋಪಿಯ ಹೆಸರನ್ನು ಹೇಳಿರುತ್ತೇನೆ. ಆರೋಪಿಯ ಅಪಘಾತ ಆಗಿದೆ ಎನ್ನುವ ಪೂರ್ವದಲ್ಲಿ ಪರಿಚಯ ಇರಲಿಲ್ಲ. ಆರೋಪಿಗಳನ್ನು ಅಪಘಾತವಾಗಿದೆ ಎನ್ನುವ ಸಂದರ್ಭದಲ್ಲಿ ನೋಡಿದ್ದನ್ನು ಬಿಟ್ಟು ಈಗಾಲೇ ಪ್ರಥಮವಾಗಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ಅಪಘಾತವಾದ ಕಾರಿನಲ್ಲಿ ಆರೋಪಿತರು ಇದ್ದರು. ನಾನು 2 ವರ್ಷಗಳಿಂದ ಪ್ರಕಾಶ್ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಪ್ರಕಾಶ್ ಹೋಟೆಲ್ ನಲ್ಲಿ ಸೂಪರ್ ವೈಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ಬೆಳಿಗ್ಗೆ 10.00 ರಿಂದ ಸಂಜೆ 3.00 ರವರೆಗೆ ಮತ್ತು ಸಂಜೆ 5.00 ರಿಂದ 10.30 ರವರೆಗೆ ನಮ್ಮ ಕೆಲಸದ ಅವಧಿ ಆಗಿರುತ್ತದೆ. ಅಪಘಾತ ಆಗಿದೆ ಎಂದು ಹೇಳುವ ದಿನ ನಾನು ಬೆಳಿಗ್ಗೆ 10.00 ರಿಂದ ಸಂಜೆ 3.00 ರವರೆಗೆ ಕೆಲಸವನ್ನು ಮಾಡಿರುತ್ತೇನೆ. ನನ್ನ ಮನೆ ನಿಟ್ಟೆ ಕಾಲೇಜಿನ ಹಿಂದೆ ಇರುತ್ತದೆ. ನಾನು ನನ್ನ ಸ್ಕೂಟಿಯಲ್ಲಿ ಕಾರ್ಕಳದಿಂದ ನಿಟ್ಟೆಗೆ ಹೋಗಿರುತ್ತೇನೆ. ಮೃತ ಮಂಜುನಾಥರವರ ನನ್ನ ತಾಯಿಯ ತಮ್ಮ ಸೋದರ ಮಾವ

ಆಗಿರುತ್ತಾರೆ. ನನಗೆ ರಾತ್ರಿ ಪಾಳಿ ಇರುವುದಿಲ್ಲ. ನಾನು ಅಪಘಾತವಾಗಿದೆ ಎಂದು ಹೇಳುವ ದಿನ ನಾನು ಕರ್ತವ್ಯಕ್ಕೆ ಹೋಗಲು ನಿಟ್ಟೆಯಿಂದ ಕಾರ್ಕಳಕ್ಕೆ ಬರುತ್ತಿದ್ದೆ. ನಾನು ಬೆಮ್ರ್ಗುು ಅಡ್ಯಾಂತಾಯ ಕ್ರಾಸ್ ಗೆ ಹೋಗಿರುವುದಿಲ್ಲ ಹೈವೆಯಲ್ಲಿ ಬರುತ್ತಿದ್ದೆ. ಅಪಘಾತವಾಗಿದೆ ಎಂದು ಹೇಳುವ ಸಮಯದಲ್ಲಿ ಸ್ಕೂಟಿಯ ನಿಧಾನಗತಿಯಲ್ಲಿತ್ತು ಹಿಂದೆಯಲ್ಲಿ ಬರುತ್ತಿದ್ದ ವಾಹನ ವೇಗವಾಗಿತ್ತು. ಮೃತ ಮಂಜುನಾಥರವರ 7-8 ತರಗತಿ ಓದಿರುತ್ತಾರೆ. ಮೃತ ಮಂಜುನಾಥರವರಿಗೆ ವಾಹನ ಚಲಾಯಿಸಲು ಚಾಲನ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಸುಮಾರು 50 ಮೀಟರ್ ಅಂತರದಿಂದ ನೋಡಿರುತ್ತೇನೆ. ಅಪಘತಾವಾದ ಕೂಡಲೇ ಸಾರ್ವಜನಿಕರು ಸೇರಿರುತ್ತಾರೆ. ಸದ್ರಿ ಸಾರ್ವಜನಿಕರಲ್ಲಿ ನನಗೆ ಸಂದೇಶ್ ಕಾಮತ್ ಮತ್ತು ಮೀನ ರವರ ಪರಿಚಯ ಇರುತ್ತದೆ. ಅವರು ಅಪಘಾತ ಆಗುವ ಸಮಯ ಇದ್ದರು. ನಾನು ಯಾವ ಆಟೋದಲ್ಲಿ ಮೃತ ಮಂಜುನಾಥರವರನ್ನು ಗಾಜ್ರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದು ನೆನಪಿಲ್ಲ. ಆಸ್ಪತ್ರೆಗೆ ಕರೆದುಕೊಂಡು ಹೋಗುವ ಸಮಯದಲ್ಲಿ ಮಂಜುನಾಥರವರು ಮಾತಾನಡುತ್ತಿದರು,ಸುಮಾರು 5 ಗಂಟೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ, ಅಲ್ಲಿಗೆ ಪೊಲೀಸರು ಬಂದಿರುತ್ತಾರೆ. ಆಸ್ಪತ್ರೆಯಲ್ಲಿ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಗಾಜ್ರಿಯಾ ಆಸ್ಪತ್ರೆಯಲ್ಲಿ ಸುಮಾರು 1.30 ಗಂಟೆಗೆ ಇದ್ದೇವು, ಅಲ್ಲಿ ವೈದ್ಯರು ಸ್ಕ್ಯಾನಿಂಗ್ ಹಾಗೂ ಹೊಲಿಗೆಯನ್ನು ಮಾಡಿರುತ್ತಾರೆ. ಮಂಜುನಾಥ ಶೆಟ್ಟಿಯವರಿಗೆ ವಿಪರೀತ ಬಿಪಿ ಹಾಗೂ ಸಕ್ಕರೆ ಖಾಯಿಲೆ ಇತ್ತು ಎಂದರೆ ಸರಿಯಲ್ಲ. ಸುಮಾರು 9.00 ಗಂಟೆಗೆ ಮಣಿಪಾಲ ಕೆಎಂಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಗಾಜ್ರಿಯಾ ಆಸ್ಪತ್ರೆಯಲ್ಲಿ ಮಂಜುನಾಥರವರಿಗೆ ಬಿಪಿ ಕಡಿಮೆಯಾಗಿದ್ದರಿಂದ ಉತ್ತಮ ಚಿಕಿತ್ಸೆಗೆ ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ತಿಳಿಸಿರುತ್ತಾರೆ.

ಕಾರ್ಕಳದಿಂದ ನಿಟ್ಟೆಗೆ ಸುಮಾರು 15 ನಿಮಿಷ ಸಾಕು. ನಮಗೆ ಊಟ ನಮ್ಮ ಹೋಟೆಲ್ ನಲ್ಲಿ ನೀಡುತ್ತಾರೆ. ಅಪಘಾತವಾದ ದಿನ ನಾನು ನನ್ನ ಕುಟುಂಬಸ್ಥರನ್ನು ನೋಡಲು ಮನೆಗೆ ಹೋಗಿರುತ್ತೇನೆ. ಕುಟಂಬಸ್ಥರು ಇರುವ ಮನೆಯಲ್ಲಿಯೇ ನಾನು ಇರುತ್ತೇನೆ. ನಾನು ಅಪಘಾತವಾಗಿದೆ ಎಂದು ಹೇಳುವ ದಿನ ನಿಟ್ಟೆಗೆ ಹೋಗಿರುವುದಿಲ್ಲ

ಎಂದರೆ ಸರಿಯಲ್ಲ. ನನ್ನ ಮೊಬೈಲ್ ನಂ. 8050302347 ಆಗಿರುತ್ತದೆ. ಅಪಘಾತವಾದ ಸಂದರ್ಭದಲ್ಲಿ ನನ್ನ ಮೊಬೈಲ್ ನನ್ನೊಂದಿಗೆ ಇತ್ತು. ಸದ್ರಿ ಮೊಬೈಲ್ ನ ಸಿ ಡಿ ಆರ್ ನ್ನು ಪರಿಶೀಲಿಸಿದರೆ ನಾನು ಆ ಸಮಯದಲ್ಲಿ ಎಲ್ಲಿ ಇದ್ದೆ ಎಂದು ತಿಳಿಯುತ್ತದೆ ಎಂದರೆ ಸರಿ.

ಅಪಘಾತಪಡಿಸಿದ ಕಾರು ಮೆರೂನ್ ಕಲ್ಲರ್ ಆಗಿತ್ತು ಅದರ ನೊಂದಾಣಿ ಸಂಖ್ಯೆ ಗೊತ್ತಿಲ್ಲ. ನನ್ನ ಮಾವನ ಸ್ಕೂಟಿಯ ಕಲ್ಲರ್ ಮೆರೆನ್ ಕಲ್ಲರ್ ಆಗಿರುತ್ತದೆ. ನನ್ನ ಮಾವ ನಿಟ್ಟೆ ಮೆಸ್ಕಾಂ ಗೆ ತಿರುಗವಾಗ ಅಪಘಾತವಾಗಿರುತ್ತದೆ. ಮೆಸ್ಕಾಂ ಕಚೇರಿಗೆ ಹೋಗುವ ಸಲುವಾಗಿ ಮಂಜುನಾಥರವರು ತಮ್ಮ ಸ್ಕೂಟಿಯ ಇಂಡಿಕೇಟರ್ ಮುಖಾಂತರ ಸೂಚನೆಯನ್ನು ನೀಡಿ ವಾಹನವನ್ನು ತಿರುಗಿಸಿರುತ್ತಾರೆ. ನನ್ನ ಮಾವ ಮಂಜುನಾಥರವರು ನಿಟ್ಟೆ ಕಾಲೇಜಿನಲ್ಲಿ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ಮಂಜುನಾಥರವರ ಮಕ್ಕಳು ವಿಮಾ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವ ಮಂಜುನಾಥರವರು ಯಾವುದೇ ಸೂಚನೆಯನ್ನು ನೀಡದೆ ಒಮ್ಮೆಲೆ ವಾಹನವನ್ನು ಬಲಬದಿಗೆ ತಿರುಗಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಮಂಜುನಾಥರವರಿಗೆ ವಾಹನ ಚಲಾಯಿಸಲು ಸರಿಯಾಗಿ ಬರುವುದಿಲ್ಲ, ಆದ್ದರಿಂದ ಅವರು ಚಾಲನ ಪರವಾನಿಗೆ ಪತ್ರ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡಿರುವುದಿಲ್ಲ, ನನ್ನ ಮಾವನ ಕುಟುಂಬಕ್ಕೆ ವಿಮಾ ಪರಿಹಾರ ಸಿಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ